1912(2)

CONQUER
GENERAL
SEXUAL
DEBILITIES
WITH
SHAKTI
SUDHA

Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 28 ಸಂಚಿಕೆ 121] ಶುಕ್ರವಾರ 2—2—45 [3 ಪೈ

ಚಿನ್ನ, ಬೆಳ್ಳಿ, ವಡವೆಗಳು,
ಅಮಶಂಪೆಗೆ ಖಾತ್ರಿ ಗುಣಕಾರಿ
ಡಿ ಸೆಂ ಟಿ ಸೈ ಡ್
ಮ ತ್ತು
ಝೂಂಡಕ್ಕಂಪೆನಿಯ ಔಷಧಿಗಳು
ಬೇ ಕಾ ದ ರೆ
ಕಾಂತರಾಜ್ & ಕೋ.
ರವೆ ಬೀದಿ, ಮೈಸೂರು.

ಆಫ್‌ಘಾನಿಸ್ಥಾನಕ್ಕೆ ಅಮೇಕನ್ ಮಂತ್ರಿ

ವಾಷಿಂಗ್ಟನ್, ಜ. 30

ಸಂಯುಕ್ತ ಸಂಸ್ಥಾನದ ಕಾರ್ಯಸಲ್ ಜನರಲ್ ಆಗಿ ಸಿಡ್ನಿ ಮತ್ತು ಆಸ್ಟ್ರೇಲಿಯಾದಲ್ಲಿದ್ದ ಎಲಿ ಎಲೆಟ್ ಸಾಪುರ್‌ರವರನ್ನು ಆಫ್‌ಘಾನಿಸ್ಥಾನದ ಮಂತ್ರಿಯಾಗಿ ನೇಮಿಸಿದೆ.

ಂ ಂ

ಹೊಗಳಿಕೆ

ನ್ಯೂಯಾರ್ಕ್, ಜ. 30

ಅರೇಬಿಯದ ಸಂಗೀತಗಾರಳು ಮತ್ತು ನಾಟಕಕರ್ತಳು ಆದ ವರಿಯ ಅಥಿಯೆ ಎಂಬುವಳು ಟೈಂಸ್ ಹಾಲ್‌ನಲ್ಲಿ ಅರೇಬಿಯದ ಸಂಗೀತ ಮತ್ತು ಹಾಡುಗಾರಿಕೆ ಕಥೆಗಳನ್ನು ಹೇಳಿದಾಗ, ನ್ಯೂಯಾರ್ಕ್ ಟೈಂಸ್ ಪತ್ರಿಕೆಯ ವಿಮರ್ಶಕಾರ ಹೊಗಳಿರುವನು. ಇವಳು ಮೂರು ಜಸ ವಾದ್ಯಗಾರರೊಡನೆ ಹಾಡಿದಳು. ಅರಬ್ಬಿ ಮತ್ತು ಇಂಗ್ಲೀಷಿನಲ್ಲಿ ಹಾಡಿದಳು.

ಂ ಂ

ಲೇಡಿ ಮಿರ್ಜಾರವರಿಗೆ ನಗಗಳ ಉಪಹಾರ

ಜಯಪುರದ ಪ್ರಧಾನ ಮಂತ್ರಿ ಸರ್ ವಿಸ್ವೇಶ್ವರಯ್ಯನವರ ಪತ್ನಿ ಲೇಡಿ ವಿಶ್ವೇಶ್ವರಯ್ಯನವರು ಬೆಂಗಳೂರಿನಿಂದ ಮುಂಬಯಿಗೆ ಬಂದು ತೈಲಿಳಿದು ತಮ್ಮ ಸ್ನೇಹಿತರ ಸಂಗಡ ಮಾತನಾಡುತ್ತಿದ್ದರು. ಸೇವನಿರತ ಸರ್ಜೆಂಟ್ ಕಾಂಪಾರ್ಟ್‌ಮೆಂಟಿನಲ್ಲಿ ದಾವಣಗೆರೆ ಸ್ಟೇಷನ್‌ನಲ್ಲಿ ಕುಳಿತವನೊಬ್ಬನು ಲೇಡಿ ವಿಶ್ವೇಶ್ವರಯ್ಯನವರು ಜವಣದ ಚೀಲ ತರುವುದಾಗಿ ಹೇಳಿದರೆಂದು ಸೇವಕನಿಂದ ತಿಳಿದುಕೊಂಡು ಪರಾರಿಯಾದನು. ಪೋಲೀಸ್ ತನಿಖೆಯಾಗುತ್ತಿದೆ.

ಕೆಂಪು ಸೇನೆ ಬರ್ಲಿನಿಗೆ 40 ಮೈಲಿ

ರಷ್ಯಾ ಸೇನೆಯು ಬರ್ಲಿನ್ನಿಗೆ 40 ಮೈಲಿ ಹತ್ತಿರ ಬಂದಿರುವುದೆಂದೂ ಫ್ರಾಂಕ್‌ಫರ್ಟಿಗೆ ಉತ್ತರದಲ್ಲಿ ಓಡರ್ ಕಣಿವೆ ದಾಟಿ, ಫೋನೆರೇನಿಯ ಮತ್ತು ಬ್ರಾಡರ್‌ಬರ್ಗ್ ಬಳಿ 150 ಮೈಲಿ ಉದ್ದ ಯುದ್ಧವಾಗುತ್ತಿದೆಯೆಂದೂ ವಾರ್ತೆ ಬಂದಿದೆ.

ಜರ್ಮನಿ ಅಳಿದರೆ ಪ್ರಪಂಚವೇ ಅಳಿವದಂತೆ

ನಾಜಿ ಕವಿ ಹೆನ್ರಿಚ್ ಹಟ್ಸರ್ ' ನಾವುವು ಈಗ ಳುಸಿದು ಬಿದ್ದರೆ, ನಮ್ಮ ಜೊತೆಯಲ್ಲಿ ಪ್ರಪಂಚವೇ ಕುಸಿದು ಬೀಳುವುದು ' ಎಂದು ಹೇಳಿರುತ್ತಾನೆ.

ಇಂಡೋರು ಮಾಜಿ ಮಹಾರಾಣಿ ಅಂಜೆಜವಾನನನ್ನು ವರಿಸಿದಳು

ಜನವರಿ 15 ರಲ್ಲಿ ಮಾಂಟರೀಲ್ (ಅಮೇರಿಕಾ) ನಲ್ಲಿ ಇಂಡೂರು ಮಹಾರಾಜರನ್ನು ಲಗ್ನವಾಗಿದ್ದ ಅಮೇರಿಕ ಮಾಗ್ಯೂರೆಟ್ ಲಾಲೆರ್ ಹೋಳ್ಕರ್ ಒಬ್ಬ ಆರೆಜೆ ಜವಾನನನ್ನು ಮದುವೆಯಾದಳು. ಇವನು ಹಿಂದೆ ದಂಪತಿ ಹೋಳ್ಕರಿಗೆ ಕಾಗದ ಬಟವಾಡೆ ಮಾಡುತ್ತಿದ್ದ. ಇವಳಿಗೆ ಇದು 3 ನೇ ಲಗ್ನ.

ತ್ರಿಮೂರ್ತಿಗಳು ಈಗಾಗಲೇ ಓಟ್ಟುಗೂಡಿ ಸಮ್ಮೇಳನ ನಡೆಸಿರುತ್ತಾರೆಂದು ಕೆಲವರ ಅಭಿಪ್ರಾಯವಾಗಿದೆ.

ಬರ್ಲಿನ್ ಪತನವಾದಕೂ ಯುದ್ಧ ನಿಲ್ಲುವುದಿಲ್ಲವಂತೆ. ನಾಜಿಗಳು ಬೆಟ್ಟಗುಡ್ಡಗಳಲ್ಲಿ, ಭೂಮಿಯೊಳಗೂ, ತಟಸ್ಥ ರಾಜ್ಯಗಳಲ್ಲಿ ಸೇರಿಕೊಂಡು ಗೊರಿಲಾ ಯುದ್ಧ ಮಾಡುತ್ತಾ, ಪ್ರಪಂಚದ 3 ನೇ ಮಹಾಯುದ್ಧಕ್ಕೆ ಪೀಠಿಕೆ ಹಾಕುವರೆಂದು ಅಮೇರಿಕನ್ನರ ಅಭಿಪ್ರಾಯ.

ಮದ್ರಾಸು ಲಕ್ಷ್ಮೀಕಾಂತಂ ಕೊಲೆ ಸಂಬಂಧದಲ್ಲಿ ಪಸ್ಕಗಿರಿಯೊಗಿ ಜಾಮೀನಾನ ಮೇಲೆ ಬಿಡಲ್ಪಟ್ಟಿರುವ ತ್ಯಾಗರಾಜ ಭಾಗವತರ್ ಮತ್ತು ಎಸ್. ಕೃಷ್ಣನ್ನರ ಜಾಮೀನು ವಜಾ ಮಾಡಜೇಕೆಂದು ಸರ್ಕಾರಿ ವಕೀಲರು ಹೈಕೋರ್ಟಿನಲ್ಲಿ ವಾದಿಸಿದರು. ವಿಚಾರಣೆ ತಾ || 9 ಕ್ಕೆ ಇಡಲಾಗಿದೆ.

ಜಯವು ಚರ್ಚಿಲ್ಲರ, ಇತರ ಟೋರ್ಟಿಗಳ ಸಹಾಯದೊಡನೆಯೂ ದೊಡ್ಡ ಯುವುದಿಲ್ಲ. ಕನ್ಸರ್ವೆಟಿವ್ ಪಾರ್ಟಿಯವರಿಗೆ ಮನಸ್ಸು ಬಲವಾಗ ಇತರರನ್ನು ಓಡಿಸುವರು. ಮಿ || ಚರ್ಚಿಲ್ಲರು ತಮ್ಮಲ್ಲಿ ವಿಶ್ವಾಸವಿದೆಯೆಂದು ಓಟು ತೆಗೆದುಕೊಳ್ಳುತ್ತಿರಲಿ. ರಷ್ಯನ್ನರು ಮುಂದುವರಿಯುತ್ತಿರಲಿ. — ಎಂಬದಾಗಿ ಪಾರ್ಲಿಮೆಂಟಿನಲ್ಲಿ ಸದಸ್ಯ ಷಿ. ವಿಲ್ ಹೇಳಿದರು.

ವಿವಿಧ ವರ್ತಮಾನ

ಭಾರತದಲ್ಲಿ ರೈಲ್ವೆ ಇಂಜಿನ್‌ಗಳನ್ನು ಸರಿಯಾಗಿ ನೋಡಿಕೊಳ್ಳಲು ಸಲಹೆ ಕೊಡಲು ಒಬ್ಬ ಬ್ರಿಟಿಷ್ ನಿಪುಣನು ಭಾರತಕ್ಕೆ ಬಂದು 4 ತಿಂಗಳ ಕಾಲ ದೇಶದಲ್ಲೆಲ್ಲಾ ಸುತ್ತಿ ಸಲಹೆ ಕೊಡುವರು.

ಂ ಂ

ಚೀಮೂರ್ ಆಸ್ಪತ್ರೆ ಕೈದಿಗಳಲ್ಲಿ 15 ಮಂದಿಯಲ್ಲಿ 8 ಮಂದಿಗೆ ಮೊತ್ತ ಮರಣ ಶಿಕ್ಷೆ ತಪ್ಪಿ ಗಡಿಪಾರ್ ಶಿಕ್ಷೆಯಾಯಿತು. ಎಲ್ಲಾ ಕೈದಿಗಳಲ್ಲಾ !

ಂ ಂ

ಮದರಾಸಿನ ಸರ್ಕಾರಿ ಕಛೇರಿಯಲ್ಲಿ 0—0—9 ರೂ. ನ ಒಂದು ಸರ್ವಿಸ್ ಸ್ಟಾಂಪು ಗೈರಾವಿಲೆಯಾಗಿದೆ. ಪೋಲೀಸಿನವರು ಪತ್ತೆ ಮಾಡಬೇಕೆಂದು ಕಛೇರಿಯ ಮುಖ್ಯಸ್ಥರು ಕೇಳಿಕೊಂಡಿರುತ್ತಾರೆ

ಂ ಂ

ನನಗೆ ತಿನ್ನಲಿಕ್ಕೆ ಏನೂ ಇರಲಿಲ್ಲ. ನನಗೆ ಕೆಲಸವೂ ಇರಲಿಲ್ಲ. ಆದ್ದರಿಂದ ಮಂತ್ರಿ ಮಂಡಲಕ್ಕೆ ಸೇರಿದೆನೆಂದು ಪಂಡಿತ ಗೋಧಾವರೇಷ್ ಮಿಸ್ರರವರು ಕಟಕ್‌ನಲ್ಲಿ ಹೇಳಿದರು

ಂ ಂ

ರಷ್ಯನರು ಶ್ಯಾಂಡ್ಸ್‌ಬರ್ಗ್ ನಗರವನ್ನು ಮತ್ತು ಇನ್ನು ಕೆಲವನ್ನು ವಶಪಡಿಸಿಕೊಂಡು ಬರ್ಲಿನ್ನಿಗೆ ನಾಲ್ವತ್ತು ಮೈಲಿಯಲ್ಲಿ ಬಂದಿರುತ್ತಾರೆ

ಂ ಂ

ಜರ್ಮನಿಯಿಂದ ಅನೇಕ ಉನ್ನತ ಅಧಿಕಾರಿಗಳು ತಪ್ಪಿಸಿಕೊಂಡು ಹೋಗುತ್ತಿರುವರು ಕೆಲವರನ್ನು ಕೆಳಕ್ಕೆ ಉರುಳಿಸಲಾಗುತ್ತಿದೆ

ಂ ಂ

ಮ್ಯಾನಿಲಾಗೆ ಅಮೇರಿಕ ಸೈನ್ಯ 25 ಮೈಲಿ ದೂರದಲ್ಲಿದೆ

ಂ ಂ

ಯುದ್ಧ ಪಾತಕಿಗಳ ವಿಚಾರಣಾ ಮಂಡಳಿಗೆ ಆಸ್ಟ್ರೇಲಿಯಾದ ಡಾ | ಕೈಟ್ ರವರು ಅಧ್ಯಕ್ಷರಾಗಿರುವರು

ನಂಜನಗೂಡು

ಶ್ರೀ ವೈ. ಕೆ. ಎಸ್. ಲಕ್ಷ್ಮಣ ಶೆಟ್ಟಿ ಯವರು ನಂಜನಗೂಡು ಮುನಿಸಿಪಾಲಿಟಿಯ ಹಾಲಿ ಉಪಾಧ್ಯಕ್ಷರು. ಈ ಪದವಿಯು ಇವರಿಗೆ ದೊರೆತಿರುವುದು ಎರಡನೆ ಸಲ. ಕಾರಣ ಇವರು ನಡೆಸಿದ ಜನ ಸೇವೆ

ನಮ್ಮ ಘನ ಸರಕಾರದವರು ಅಕ್ಕಿ ರತಿಗಿ ಮುಂತಾದ ಧಾನ್ಯಗಳ ಬೆಲೆಯನ್ನು ಹೆಚ್ಚು ಮಾಡಿದ್ದು ಇವರಿಗೆ ಒಪ್ಪದೆ ಜನಸೇವೆಯೇ ದೈವಸೇವೆ ಎಂದು ತಿಳಿದು, ಜನೋಪಕಾರಕ್ಕಾಗಿ ಒಂದು ಅರ್ಜಿಯನ್ನು ಕೌನ್ಸಿಲ್ ಮುಂದೆ ತಂದರು. ಸರ್ವಾನುಮತದಿಂದ ಪಾಸಾಯಿತು.

ಸೌದೆ ಅಭಾವ ನಿವಾರಣೆಗೋಸ್ಕರ ಕಂಟ್ರೋಲು ಮಾಡಬೇಕೆಂದು ತಿಳಿದರು. ಇದರಿಂದ ಪ್ರಜೆಗಳಿಗೆ ಅನುಕೂಲವೆಂದು ತಿಳಿಸಿದರು. ಮುನಿಸಿಪಲ್ ಡಿಪೋ ಆಗತ್ಯವೆಂದು ಹೇಳಿದರು. ಇದರಿಂದ ಮುನಿಸಿಪಾಲಿಟಿಗೆ ನಷ್ಟವಿಲ್ಲವೆಂದೂ, ಜನಗಳಿಗೆ ಅನುಕೂಲವೆಂದೂ ತಿಳಿಸಿದರು. ಪಿಂಡಾರಗೇರಿಯಲ್ಲಿ ಪ್ಲೇಗಿನ ಇನಾಕ್ಯುಲೇಷನ್ನನ್ನು ಸುಮಾರು 250 ಜನಗಳಿಗೆ ಮಾಡಿಸಿದರು. ಈಗಿನ ನೂತನ ಅಧ್ಯಕ್ಷರಾದ ಶ್ರೀ ಎ. ವಿ. ಕೃಷ್ಣರವರು ಇವರ ಸೇವೆಯನ್ನು ಮೆಚ್ಚಿದರು.

ಅಧ್ಯಕ್ಷರೂ ಉಪಾಧ್ಯಕ್ಷರೂ ಮೆಂಬರುಗಳು ಮುತುವರ್ಜಿ ವಹಿಸಿಕ್ಷೀಪ್ರದಲ್ಲೇ ಒಂದು ಟೌನ್‌ಹಾಲ್ ಕಟ್ಟಡವನ್ನು ಏರ್ಪಡಿಸುತ್ತಾರೆಂದು ಭರವಸೆ ಇದೆ.

ಪುರನಿವಾಸಿ

ಇರ್ವಾಗೆ ಅಮೆರಿಕನ್ ರಾಯಭಾರಿ

ವಾಷಿಂಗ್ಟನ್, ಜ. 30

ಸಂಯುಕ್ತ ಸಂಸ್ಥಾನದ ಪೂರ್ವದಲ್ಲಿ ಕಾರ್ಯನಿರತರಾಗಿರುವ ವಾಲೇಸ್ ಎಸ್. ಮರ್ಫಿಯವರನ್ನು ಸಂಯುಕ್ತ ಸಂಸ್ಥಾನದ ರಾಯಭಾರಿಯನ್ನಾಗಿ ಇರಾನಿನಲ್ಲಿ ನೇಮಿಸಿರುವರೆಂದು ಶ್ವೇತಭವನದಿಂದ ಹೊರಟ ಪ್ರಕಟಣೆ ತಿಳಿಸುತ್ತದೆ.

ಮೈಸೂರು ರಣಜಿತ್ ಟಾಕೀಸಿನಲ್ಲಿ 4 ನೇ ವಾರ

At Ranjit ತಕದಿರ್

(ಹಿಂದಿ)

ಚಂದ್ರಮೋಹನ್ — ಮೋತಿಲಾಲ್ — ನರ್ಗೀಸ್

ಚಾರ್ಲಿ

ಮುಂತಾದವರು ಪಾತ್ರವಹಿಸಿರುವರು

— ದಿನವಹಿ ಮೂರು ಆಟಗಳು —

ರಕ್ತ ವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಅಪೆರಾ ಟಾಕೀಸ್ 3—2—45 ರಿಂದ

ದೇವಕನ್ಯ

ಹೊನ್ನಪ್ಪ ಭಾಗವತರ್, ಯು. ಆರ್. ಜೀವರತ್ನಂ, ಟಿ. ಆರ್. ರಾಮಚಂದ್ರ

ಮುಂತಾದವರು ಪಾತ್ರವಹಿಸಿರುವರು.

ಪ್ರತಿ ದಿನ 3 ಆಟಗಳು

— ಶೀಘ್ರದಲ್ಲೇ ಬರುತ್ತದೆ —

ವೈ. ವಿ. ರಾವ್, ಕಮಲಾ ಕೊಟ್ನಿಸ್, ಭಾನುಮತಿ, ನಾರಾಯಣರಾವ್

ಪಾತ್ರವಹಿಸಿರುವ

ತಹಸಿಲ್ದಾರ್

(ತೆಲುಗು ಚಿತ್ರ)

ಅಕ್ಷರ

ಸಾಮಾಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

Reserved for

OSWAL & CO.

TALK-A-TONE

(The Pioneer Film-mag of S. India)

Local Agent—D. Mahaadev

Opera Talkies, Mysore

For Good Printing—

L. N. Press

Sirampet MYSORE

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ

No. R 5. 1080 / 44-45

ಇಸ್ತಿಹಾರ್ ನಾಮೆ

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ—

ಲಷ್ಕರ್ ಎಮರ್ಜನ್ಸಿ ಡಿಪೋವಿನಲ್ಲಿ ರತಕ್ಕ 141 ಪಲ್ಲಾ 95 ಸೇರು ಹಸಿ ಕಡಲೆಯನ್ನು ಈ ಕೆಳಗೆ ರುಜು ಮಾಡಲ್ಪಟ್ಟಿರುವರಿಂದ 5-2-45 ನೇ ತಾರೀಖಿನ ದಿವಸ ಬೆಳಿಗ್ಗೆ 11 ಘಂಟೆಗೆ, ಮೇಲೆ ಹೇಳಿರುವ ಡಿಪೋವಿನಲ್ಲಿ ಒಹಿರಂಗವಾಗಿ ಹರಾಜುಮಾಡಲ್ಪಡುತ್ತದೆ.

ಹರಾಜು ಖೈದಾದ ಮೇಲೆ ಆಖೈರು ಬಿಡ್ಡುದಾರ್ರು ಪೂರ್ತಾನೊಬಲಗನ್ನು ಸ್ಥಳದಲ್ಲಿಯೇ ಪಾವತಿ ಮಾಡತಕ್ಕದ್ದು. ಹಾಗೆ ಪೊಬಲಗನ್ನು ಹಾಜರ್ಮಾಡಲು ತಪ್ಪಿದಲ್ಲಿ ದುಸರಾ ಹರಾಜು ಮಾಡಿಸಿ ಅದರಿಂದಾಗುವ ನಷ್ಟವನ್ನು ಮೊದಲಿನ ಬಿಡ್ಡುದಾರರಿಂದ ಕಂಬಾಯಿದ ಬಾಕಿಯಂತೆ ವಸೂಲ್ಮಾಡಲ್ಪಡುತ್ತದೆ. ಆದರೆ ದುಸರ ಹರಾಜಿನಲ್ಲಿ ಹೆಚ್ಚಿಗೆ ಉತ್ಪತ್ತಿಯಾದಲ್ಲಿ ಮೊದಲಿನ ಬಿಡ್ಡುದಾರರಿಗೆ ಯಾವ ವಿಧವಾದ ಫಾಯಿದೆಯೂ ಕೊಡಲ್ಪಡುವುದಿಲ್ಲ.

ಈ ಸರಕನ್ನು ನೋಡಲು ಲಷ್ಕರ್ ಎಮರ್ಜನ್ಸಿ ಡಿಪೋವಿನಲ್ಲಿ 1-2-45 ನೇ ತಾರೀಖಿನಲಾಗಾಯ್ತು ಇಡಲ್ಪಡುತ್ತದೆ.

ಈ ಹರಾಜನ್ನು ನಂಜೂರು ಮಾಡಿದ ಏಳು ದಿವಸಗಳೊಳಗೆ ಸರಕನ್ನು ಸುಳ್ಳದ್ದೂ ಪಡಿಯುತಕ್ಕದ್ದು.

ಟಿ. ವಿ. ರೆಡ್ಡಿ

ರೇಷನಿಂಗ್ ಆಫೀಸರ್, ಮೈಸೂರು.

ಅಂದವಾದ ಹೊಲಿಗೆಗೆ ರೆಡಿಮೇಡ್ ಬಟ್ಟೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್

ಸಯ್ಯಾಜಿರಾವ್ ರಸ್ತೆ, ಮೈಸೂರು

ಚಿನ್ನಾ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 47-4-0
ಚಿನ್ನ ತೊಲ 1 ಕ್ಕೆ	68-0-0
ಬೆಳ್ಳಿ "	1-4-0

ಸತ್ಯವಾದಿ

— ವಾರದ ಸಂಚಿಕೆ —

ಪರಸ್ಥಳಕ್ಕೆ ವಾರ್ಷಿಕ ಚಂದಾ ಅಂಚೆಸಮೇತ ಸೇರಿ ರೂ. 1-12-0

Edited, Printed and published by M. S. Krishna Rao, at the Satvavadi Press, Chamaraja Agrahar, Mysore